**ದಿಃ 18-08-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

ಸಾಕ್ಷಿದಾರರ ಹೆಸರು - ರಾಮಲಿಂಗಪ್ಪಾ ಶಿವಪ್ಪಾ ಉಪ್ಪಾರ

ವಯಸ್ಸು - 47 ವರ್ಷ

ಉದ್ಯೋಗ - ವಲಯ ಅರಣ್ಯ ಅಧಿಕಾರಿ

ಸಾಕೀನ - ಹುಬ್ಬಳ್ಳಿ

**ಮುಖ್ಯ ವಿಚಾರಣೆಃ ಎದುರುದಾರ ಪರ ವಕೀಲರಿಂದ;**

ನಾನು ಅರ್ಜಿದಾರಳನ್ನು ದಿಃ 15-03-2007 ರಂದು ವಿವಾಹವಾಗಿದ್ದು , ದಿಃ 21-01-2009 ರಂದು ನನ್ನ ಮಗನ ಜನನವಾಯಿತು. 2013 ರ ಫೆಬ್ರುವರಿ ತಿಂಗಳಲ್ಲಿ ಅರ್ಜಿದಾರಳು ನನಗೆ ಏನನ್ನು ತಿಳಿಸದೆ ನಮ್ಮ ಮನೆಯನ್ನು ಬಿಟ್ಟು , ಬಂಗಾರ, ಬಟ್ಟೆಗಳನ್ನು ತೆಗೆದುಕೊಂಡು ಹೋಗಿರುತ್ತಾರೆ. ಒಂದು ವರ್ಷದ ನಂತರ 1 ನೇ ಅರ್ಜಿದಾರಳ ಅಣ್ಣನ ಮದುವೆಗೆ ನಮ್ಮನ್ನು ಕರೆದಿದ್ದು , ನಾನು ಹೋಗಿರುತ್ತೇನೆ. ನಂತರ ನಾನು ನನ್ನ ತಂದೆ ಸೇರಿ ಅರ್ಜಿದಾರಳನ್ನು ಕರೆದುಕೊಂಡು ಹೋಗಲು ಅವರ ತವರು ಮನೆಗೆ ಹೋದಾಗ, ಅರ್ಜಿದಾರಳು ಹಾಗೂ ಅವರ ಮನೆಯಲ್ಲಿದ್ದ ಹಿರಿಯರು ಸೇರಿ ನನ್ನನ್ನು, ನನ್ನ ತಂದೆಯನ್ನು ಅವಮಾನ ಮಾಡಿ ಕಳುಹಿಸಿದರು. ಆಗ ಅರ್ಜಿದಾರಳನ್ನು ಗೋಕಾಕಿನಲ್ಲಿ ಮನೆ ಮಾಡಿ ಅವಳ ಜೊತೆ ವಾಸವಿದ್ದರೆ ಮಾತ್ರ 1ನೇ ಅರ್ಜಿದಾರಳನ್ನು ಮತ್ತು ನನ್ನ ಮಗನನ್ನು ಕಳುಹಿಸಿಕೊಡುತ್ತೇವೆ ಎಂದು ಹೇಳಿದರು. ಆಗ ನಾನು ನನ್ನ ತಂದೆ ತಾಯಿಗೆ ಒಬ್ಬನೇ ಮಗನಾದ ಕಾರಣ ಗೋಕಾಕಿನಲ್ಲಿ ಮನೆ ಮಾಡಲು

ಆಗುವುದಿಲ್ಲ ಎಂದು ಹೇಳಿದ್ದರಿಂದ ಅರ್ಜಿದಾರಳು ನನ್ನ ಜೊತೆ ಬರಲಿಲ್ಲ, ಆಗಿನಿಂದ 1 ಮತ್ತು 2 ನೇ ಅರ್ಜಿದಾರರು, 1 ನೇ ಅರ್ಜಿದಾರಳ ತವರು ಮನೆಯಲ್ಲಿಯೇ ಇರುತ್ತಾರೆ.

2) ನಂತರ ಅರ್ಜಿದಾರರು 2022 ನೇ ಸಾಲಿನಲ್ಲಿ ಪ್ರಸ್ತುತ ಅರ್ಜಿಯನ್ನು ಸಲ್ಲಿಸಿರುತ್ತಾರೆ. ನಾನು ಅರ್ಜಿದಾರರಿಗೆ ಸಮರ್ಪಕ ಜೀವನಾಂಶವನ್ನು ನೀಡಲು ತಯಾರಿದ್ದು ಅವರು ಹೇಳುವ ಬೇರೆ ಶರತ್ತುಗಳಿಗೆ ನಾನು ಒಪ್ಪುವುದಿಲ್ಲ. 1 ನೇ ಅರ್ಜಿದಾರಳ ತವರು ಮನೆಯವರು ಶ್ರೀಮಂತರಿದ್ದು ವ್ಯಾಪಾರ ಮತ್ತು ಜಮೀನುಗಳನ್ನು ಹೊಂದಿರುತ್ತಾರೆ, ನಾನು ಮಧ್ಯಮ ವರ್ಗದ ವ್ಯಕ್ತಿಯಾಗಿದ್ದು, 1 ನೇ ಅರ್ಜಿದಾರಳ ತವರು ಮನೆಯವರು ತಮ್ಮ ಅಂತಸ್ತಿಗೆ ತಕ್ಕಂತೆ ಇರುವಂತೆ ನನಗೆ ಶರತ್ತು ಒಡ್ಡಿದ್ದರಿಂದ ನಾನು ಅರ್ಜಿದಾರರ ಜೊತೆ ಇರಲು ಇಚ್ಛಿಸುವುದಿಲ್ಲ. ನಾನು ನನಗೆ ಬರುವ ಆದಾಯದಲ್ಲಿ ಅರ್ಜಿದಾರಳನ್ನು ನೋಡಿಕೊಳ್ಳಲು ಒಪ್ಪಿದ್ದೆ ಆದರೆ ಅವರು ಗೋಕಾಕಿನಲ್ಲಿಯೇ ವಾಸ ಮಾಡಲು ಒತ್ತಾಯಿಸಿದ್ದರಿಂದ ನಾನು ಅರ್ಜಿದಾರರ ಜೊತೆ ಇರಲಾಗುವುದಿಲ್ಲ. ಅರ್ಜಿದಾರರು ನನನ್ನು ಬಿಟ್ಟು ಹೋದ ನಂತರ ನನಗೆ ಅವಮಾನವಾಗಿ ಆರೋಗ್ಯ ಸಮಸ್ಯೆಗಳು ಉಂಟಾಗಿರುತ್ತವೆ. ನಾನಾಗಲೀ ನನ್ನ ತಂದೆ ತಾಯಿಯಾಗಲೀ 1 ನೇ ಅರ್ಜಿದಾರಳಿಗೆ ಎಂದಿಗೂ ವರದಕ್ಷಿಣೆ ತರುವಂತೆ ಹೇಳಿರುವುದಿಲ್ಲ ಮತ್ತು ಅವರಿಗೆ ಯಾವುದೇ ತೊಂದರೆಯನ್ನು ನೀಡಿರುವುದಿಲ್ಲ.

ಎದುರುದಾರ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಿ ಮುಂದೂಡಲಾಯಿತು.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

ಪ್ರ.ದಿ.&ನ್ಯಾದಂ., ಗೋಕಾಕ.